

## ಸಮತಾವಾದಕ್ಕೆ ಬಲಿಯಾದವರ ಸ್ಮಾರಕ

ಅಂದಿನ ಜೆಕಸ್ಲೊವಾಕಿಯಾದಲ್ಲಿ ಸಮತಾವಾದ (ಕಮ್ಯೂನಿಸಂ) ಉತ್ತುಂಗದಲ್ಲಿದ್ದಾಗ ತಪ್ಪಿತಸ್ಥ ರಾಜಕೀಯ ಅಪರಾಧಿಗಳ ಪೈಕಿ ಕೆಲವರು ಜೈಲಿನಲ್ಲಿಯೇ ಮರಣಹೊಂದಿದ್ದರೆ, ಇನ್ನೂ ಕೆಲವರು ತಪ್ಪಿಸಿಕೊಳ್ಳಲು ಪ್ರಯತ್ನಿಸಿ ಕೊಲ್ಲಲ್ಪಟ್ಟರು. 1948 ಮತ್ತು 1989ರ ನಡುವೆ ನಿರಂಕುಶ ಸಮತಾವಾದಕ್ಕೆ ಬಲಿಯಾದವರ ನೆನಪಿಗಾಗಿ ಇಂದಿನ ಜೆಕ್ ಗಣರಾಜ್ಯದ ರಾಜಧಾನಿ 'ಪ್ರಾಗ್' ಪಟ್ಟಣದ 'ಪೆಟ್ರಿನ್ ಹಿಲ್'ನಲ್ಲಿ ಸ್ಮಾರಕದ ಶಿಲ್ಪಗಳನ್ನು ಸ್ಥಾಪಿಸಿದ್ದಾರೆ. ಕೊಳೆಯುತ್ತಿರುವ ಹಾಗೂ ಮುರಿದ ಮಾನವರ ಭಯಾನಕ ರೂಪವುಳ್ಳ ಏಳು ಸರಣಿ ಕಂಚಿನ ಶಿಲ್ಪಗಳನ್ನು ಸ್ಥಾಪಿಸಿದ್ದಾರೆ. ಹಂತ ಹಂತವಾಗಿ ಶಾರೀರಿಕ ಹಾಗೂ ಮಾನಸಿಕವಾಗಿ ಮಾನವೀಯತೆ ನಾಶಹೊಂದುತ್ತಿರುವುದನ್ನು ಈ ಶಿಲ್ಪಗಳು ಸೂಚಿಸುತ್ತವೆ. ಇಲ್ಲಿಗೆ ಭೇಟಿನೀಡುವ ಜೆಕ್ ಪ್ರಜೆಗಳು ಹೂಗಳನ್ನು ಸಮರ್ಪಿಸಿ ಪ್ರಾರ್ಥನೆ ಸಲ್ಲಿಸುತ್ತಾರೆ.

—ಜಿ. ನಾಗೇಂದ್ರ ಕಾವೂರು, ಮಂಗಳೂರು



## ಹಳೆ ಚಿನ್ನ!

ನನ್ನ ಅಜ್ಜಿಯವರ ಕಾಲದಿಂದ ನನ್ನ ತಾಯಿಗೆ ಬಂದು ಈಗಲೂ ನಾನು ಉಪಯೋಗಿಸುತ್ತಿರುವ ಸುಮಾರು 75 ವರ್ಷಗಳ ಹಳೆಯ 'ಸಿಂಗರ್' ಹೊಲಿಗೆ ಯಂತ್ರ ಇದು. (ಚಿತ್ರದಲ್ಲಿ ಎಡಗಡೆ ಇರುವುದು). ಬ್ರಿಟನ್‌ನಲ್ಲಿ ಇದನ್ನು ತಯಾರಿಸಲಾಗಿದೆ. ನನ್ನ ಹವ್ಯಾಸ ಪೂರಕವಾಗಿ 20 ವರ್ಷಗಳಿಂದ ಹೊಸ 'ಸಿಂಗರ್ ಫ್ಯಾಷನ್ ಮೇಕರ್, ಸುಪ್ರೀಮ್' ಸಹ ಅದರೊಂದಿಗೆ ಲಭ್ಯವಿದೆ. ಆದರೆ ನನ್ನ ತೃಪ್ತಿಗೆ ಅನುಗುಣವಾಗಿ ಗುಣಮಟ್ಟದ ಕೆಲಸಗಳು ಆಗುತ್ತಿರುವುದು ಹಳೆಯ ಯಂತ್ರದಿಂದಲೇ. 'ಓಲ್ಡ್ ಈಸ್ ಗೋಲ್ಡ್' ಎನ್ನುವುದನ್ನು ರುಜುವಾತು ಪಡಿಸಲು ಸಾಕ್ಷಿಗಳಾಗಿ ನನ್ನ ಮನೆಯಲ್ಲಿವೆ.

—ಡಿ.ಎನ್. ಶಾಲಿನಿ, ತುಮಕೂರು

## ಟೋಪಿ ಧರಿಸಿದ ಹುತ್ತ

ಇದು ಹುತ್ತದ ಚಿತ್ರ. ಹುತ್ತದ ಮೇಲ್ತುದಿಯಲ್ಲಿ ಬುಟ್ಟಿ ಇಡಲಾಗಿದೆ. ಬುಟ್ಟಿಯ ಬುಡದಲ್ಲಿ ಗೆದ್ದಲು ಹುತ್ತ ನಿರ್ಮಾಣವಾಗಿ, ಅದು ಮೇಲಕ್ಕೆ ಮೇಲಕ್ಕೆ ಹೋಗುತ್ತಿರುವಂತೆಯೇ ಜತೆಯಲ್ಲಿ ಬುಟ್ಟಿಯೂ ಮೇಲಕ್ಕೆ ಹೋಗುತ್ತಿದೆ. ಸದ್ಯ ಇದು ಬೃಹದಾಕಾರವಾಗಿ ಬೆಳೆದು ನಿಂತಿದ್ದು, ಹಾನಗಲ್ ತಾಲೂಕಿನ ಸುಂದರ ಪ್ರವಾಸಿ ಸ್ಥಳವಾದ 'ಅಗಡಿ ತೋಟ'ದಲ್ಲಿ ಕಂಡು ಬಂತು.

—ದೇವಿದಾಸ ಸುವರ್ಣ, ಅಂಕೋಲಾ

